# ಬೇನಾಮಿ ವ್ಯವಹಾರ (ನಿಷೇಧ) ಅಧಿನಿಯಮ, 1988

(1988ರ ಅಧಿನಿಯಮ ಸಂಖ್ಯೆ 45)

[5ನೇ ಸೆಪ್ಟೆಂಬರ್ 1988]

ಬೇನಾಮಿ ವ್ಯವಹಾರಗಳನ್ನು ಮತ್ತು ಬೇನಾಮಿಯಾಗಿ ಹೊಂದಿರುವ ಸ್ವತ್ತನ್ನು ಹಿಂದಕ್ಕೆ ಪಡೆಯುವ ಹಕ್ಕನ್ನು ನಿಷೇಧಿಸುವ ಮತ್ತು ಅವುಗಳಿಗೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ವಿಷಯಗಳಿಗಾಗಿನ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೊಂಬತ್ತನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದು:-

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ಬೇನಾಮಿ ವ್ಯವಹಾರ (ನಿಷೇಧ) ಅಧಿನಿಯಮ, 1988 ಎಂದು ಕರೆಯತಕ್ಕದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) 3,5 ಮತ್ತು 8ನೇ ಪ್ರಕರಣಗಳ ಉಪಬಂಧಗಳು ಕೂಡಲೇ ಜಾರಿಗೆ ಜಾರಿಗೆ ಬರತಕ್ಕದು, ಮತ್ತು ಈ ಅಧಿನಿಯಮದ ಉಳಿದ ಉಪಬಂಧಗಳು, 1988ರ ಮೇ 19ನೇ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದು.

2. ಪರಿಭಾಷೆಗಳು:- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಬೇನಾಮಿ ವ್ಯವಹಾರ" ಎಂದರೆ ಒಬ್ಬ ವ್ಯಕ್ತಿಯು ಸಂದಾಯ ಮಾಡಿದ ಅಥವಾ ಒದಗಿಸಿದ ಪ್ರತಿಫಲಕ್ಕಾಗಿ ಇನ್ನೊಬ್ಬ ವ್ಯಕ್ತಿಗೆ ಸ್ವತ್ತನ್ನು ವರ್ಗಾಯಿಸಿರುವಂಥ ಯಾವುದೇ ವ್ಯವಹಾರ;

(ಬಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಸಿ) "ಸ್ವತ್ತು" ಎಂದರೆ ಚರ ಅಥವಾ ಸ್ಥಿರ, ಮೂರ್ತ ಅಥವಾ ಅಮೂರ್ತವಾದುದಾಗಿರುವ ಯಾವುದೇ ಬಗೆಯ ಸ್ವತ್ತು, ಮತ್ತು ಅದು ಅಂಥ ಸ್ವತ್ತಿನಲ್ಲಿನ ಯಾವುದೇ ಹಕ್ಕು ಅಥವಾ ಹಿತಾಸಕ್ತಿಯನ್ನು ಒಳಗೊಳ್ಳುತ್ತದೆ.

3. ಬೇನಾಮಿ ವ್ಯವಹಾರಗಳ ನಿಷೇಧ:- (1) ಯಾರೇ ವ್ಯಕ್ತಿಯು ಯಾವುದೇ ಬೇನಾಮಿ ವ್ಯವಹಾರವನ್ನು ಮಾಡಿಕೊಳ್ಳತಕ್ಕದಲ್ಲ.

(2) (1)ನೇ ಉಪಪ್ರಕರಣದಲ್ಲಿ ಇರುವುದು ಯಾವುದೂ-

(ಎ) ಯಾರೇ ವ್ಯಕ್ತಿಯು ತನ್ನ ಹೆಂಡತಿ ಅಥವಾ ಅವಿವಾಹಿತ ಮಗಳ ಹೆಸರಿನಲ್ಲಿ ಸ್ವತ್ತನ್ನು ಖರೀದಿಸುವುದಕ್ಕೆ ಅನ್ವಯವಾಗತಕ್ಕದ್ದಲ್ಲ ಮತ್ತು ತದ್ವಿರುದ್ಧವಾದುದು ರುಜುವಾತಾದ ಹೊರತು, ಸದರಿ ಸ್ವತ್ತನ್ನು ಹೆಂಡತಿ ಅಥವಾ ಅವಿವಾಹಿತ ಮಗಳ ಪ್ರಯೋಜನಕ್ಕಾಗಿ ಖರೀದಿಸಲಾಗಿತ್ತೆಂದು ಪೂರ್ವಭಾವನೆ ಮಾಡತಕ್ಕದ್ದು;

(ಬಿ) (i) ಠೇವಣಿಗಾರರ ಅಧಿನಿಯಮ, 1996ರ 10ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನೋಂದಾಯಿತ ಮಾಲಿಕನಾಗಿರುವ ಠೇವಣಿದಾರನು;

(ii) ಠೇವಣಿಗಾರನ ಏಜಂಟನಾಗಿರುವ ಭಾಗಿದಾರನು-

-ಹೊಂದಿರುವ ಭದ್ರತೆಗಳಿಗೆ ಅನ್ವಯವಾಗತಕ್ಕದ್ದಲ್ಲ.

ವಿವರಣೆ.- "ಠೇವಣಿಗಾರ" ಮತ್ತು "ಭಾಗಿದಾರ" ಎಂಬ ಪದಾವಳಿಗಳು, ಠೇವಣಿದಾರರ ಅಧಿನಿಯಮ, 1996ರ 2ನೇ ಪ್ರಕರಣದ (1)ನೇ ಉಪ-ಪ್ರಕರಣದ (ಇ) ಮತ್ತು (ಜಿ) ಖಂಡಗಳಲ್ಲಿ ಅವುಗಳಿಗೆ ನೀಡಿರುವ ಅರ್ಥಗಳನ್ನೇ ಅನುಕ್ರಮವಾಗಿ ಹೊಂದಿರತಕ್ಕದ್ದು.

(3) ಯಾವುದೇ ಬೇನಾಮಿ ವ್ಯವಹಾರವನ್ನು ಮಾಡಿಕೊಳ್ಳುವ ಯಾರೇ ಆಗಲಿ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದು.

(4) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಪ್ರಕರಣದ ಮೇರೆಗಿನ ಅಪರಾಧವು ಅಸಂಜ್ಞೇಯ ಮತ್ತು ಜಾಮಿನೀಯವಾಗಿರತಕ್ಕದು.

4. ಬೇನಾಮಿಯಾಗಿ ಹೊಂದಿರುವ ಸ್ವತ್ತನ್ನು ಹಿಂದಕ್ಕೆ ಪಡೆಯುವ ಹಕ್ಕಿನ ನಿಷೇಧ:- (1) ಬೇನಾಮಿಯಾಗಿ ಹೊಂದಿರುವ ಯಾವುದೇ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕನ್ನು ಜಾರಿಗೊಳಿಸಲು ಯಾವ ವ್ಯಕ್ತಿಯ ಹೆಸರಿನಲ್ಲಿ ಆ ಸ್ವತ್ತನ್ನು ಹೊಂದಲಾಗಿದೆಯೋ ಆ ವ್ಯಕ್ತಿಯ ವಿರುದ್ಧ ಅಥವಾ ಇತರ ಯಾವನೇ ವ್ಯಕ್ತಿಯ ವಿರುದ್ಧ, ಅಂಥ ಸ್ವತ್ತಿನ ನಿಜವಾದ ಒಡೆಯನಾಗಿರುವುದಾಗಿ ಕ್ಲೇಮು ಮಾಡುವ ವ್ಯಕ್ತಿಯಾಗಲಿ ಅಥವಾ ಅವನ ಪರವಾಗಿ ಯಾರೇ ಆಗಲಿ ಯಾವುದೇ ದಾವೆ, ಕ್ಲೇಮು ಅಥವಾ ಕ್ರಮವನ್ನು ಹೂಡತಕ್ಕುದಲ್ಲ.

(2) ಬೇನಾಮಿಯಾಗಿ ಹೊಂದಿರುವ ಯಾವುದೇ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕನ್ನು ಆಧರಿಸಿದ ಯಾವುದೇ ಪ್ರತಿರಕ್ಷೆಯನ್ನು ಯಾವ ವ್ಯಕ್ತಿಯ ಹೆಸರಿನಲ್ಲಿ ಸ್ವತ್ತನ್ನು ಹೊಂದಲಾಗಿದೆಯೋ ಆ ವ್ಯಕ್ತಿಯ ವಿರುದ್ಧವಾಗಲಿ ಅಥವಾ ಇತರ ಯಾವನೇ ವ್ಯಕ್ತಿಯ ವಿರುದ್ಧವಾಗಲಿ ಅಂಥ ಸ್ವತ್ತಿನ ನಿಜವಾದ ಒಡೆಯನಾಗಿರುವುದಾಗಿ ಕ್ಲೇಮು ಮಾಡುವ ವ್ಯಕ್ತಿಯಾಗಲಿ ಅಥವಾ ಅವನ ಪರವಾಗಿ ಯಾರೇ ಆಗಲಿ ಹೂಡಿದ ಯಾವುದೇ ದಾವೆ, ಕ್ಲೇಮು ಅಥವಾ ಕ್ರಮದಲ್ಲಿ ಪುರಸ್ಕರಿಸತಕ್ಕುದಲ್ಲ.

(3) ಈ ಪ್ರಕರಣದಲ್ಲಿರುವುದು ಯಾವುದೂ,-

(ಎ) ಯಾರ ಹೆಸರಿನಲ್ಲಿ ಸ್ವತ್ತನ್ನು ಹೊಂದಲಾಗಿದೆಯೋ ಆ ವ್ಯಕ್ತಿಯು ಹಿಂದೂ ಅವಿಭಕ್ತ ಕುಟುಂಬದಲ್ಲಿನ ದಾಯಾದಿಯಾಗಿರುವಲ್ಲಿ ಮತ್ತು ಆ ಸ್ವತ್ತನ್ನು ಆ ಕುಟುಂಬದಲ್ಲಿನ ದಾಯಾದಿಗಳ ಪ್ರಯೋಜನಕ್ಕಾಗಿ ಹೊಂದಿರುವಲ್ಲಿ; ಅಥವಾ

(ಬಿ) ಯಾರ ಹೆಸರಿನಲ್ಲಿ ಸ್ವತ್ತನ್ನು ಹೊಂದಿರಲಾಗಿದೆಯೋ ಆ ವ್ಯಕ್ತಿಯು ನ್ಯಾಸಧಾರಿ ಅಥವಾ ನಂಬಿಕೆಯ ಸ್ಥಾನದಲ್ಲಿರುವ ಇತರ ವ್ಯಕ್ತಿಯಾಗಿರುವಲ್ಲಿ ಮತ್ತು ಆ ಸ್ವತ್ತನ್ನು, ಅವನು ನ್ಯಾಸಧಾರಿಯಾಗಿರುವ ಅಥವಾ ಯಾರ ಬಗ್ಗೆ ಅವನು ಅಂಥ ನಾತೆಯಲ್ಲಿರುವನೋ ಆ ಇನ್ನೊಬ್ಬ ವ್ಯಕ್ತಿಯ ಪ್ರಯೋಜನಕ್ಕಾಗಿ ಹೊಂದಿರುವಲ್ಲಿ

-ಅನ್ವಯವಾಗತಕ್ಕುದಲ್ಲ.

5. ಬೇನಾಮಿಯಾಗಿ ಹೊಂದಿರುವ ಸ್ವತ್ತು ಆರ್ಜನೆಗೆ ಗುರಿಯಾಗುವುದು:- (1) ಬೇನಾಮಿಯಾಗಿ ಹೊಂದಿರುವ ಎಲ್ಲಾ ಸ್ವತ್ತುಗಳು, ನಿಯಮಿಸಬಹುದಾದಂಥ ಪ್ರಾಧಿಕಾರವು, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಪ್ರಕ್ರಿಯೆಯನ್ನು ಅನುಸರಿಸಿದ ತರುವಾಯ, ಆರ್ಜಿಸುವುದಕ್ಕೆ ಒಳಪಟ್ಟಿರತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಸ್ವತ್ತನ್ನು ಆರ್ಜಿಸುವುದಕ್ಕಾಗಿ ಯಾವುದೇ ಮೊಬಲಗನ್ನು ಸಂದಾಯ ಮಾಡತಕ್ಕುದಲ್ಲವೆಂದು ಸಂದೇಹಗಳ ನಿವಾರಣೆಗಾಗಿ ಈ ಮೂಲಕ ಘೋಷಿಸಲಾಗಿದೆ.

6. ಈ ಅಧಿನಿಯಮವು ಕೆಲವು ಪ್ರಕರಣಗಳಲ್ಲಿ ಅನ್ವಯವಾಗದಿರುವುದು:- ಈ ಅಧಿನಿಯಮದಲ್ಲಿರುವುದು ಯಾವುದೂ, ಸ್ವತ್ತು ವರ್ಗಾವಣೆ ಅಧಿನಿಯಮ, 1882 (1882ರ 4)ರ 53ನೇ ಪ್ರಕರಣದ ಉಪಬಂಧಗಳಿಗೆ, ಅಥವಾ ಕಾನೂನು ಬಾಹಿರ ಉದ್ದೇಶದ ವರ್ಗಾವಣೆಗಳಿಗೆ ಸಂಬಂಧಪಟ್ಟ ಯಾವುದೇ ಕಾನೂನಿಗೆ ಬಾಧಕವನ್ನುಂಟು ಮಾಡತಕ್ಕುದಲ್ಲ.

7. ಕೆಲವು ಅಧಿನಿಯಮಗಳ ಉಪಬಂಧಗಳ ನಿರಸನ:- (1) ಭಾರತ ನ್ಯಾಸ ಅಧಿನಿಯಮ, 1882 (1882ರ 2)ರ 81, 82 ಮತ್ತು 94ನೇ ಪ್ರಕರಣಗಳು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ 66ನೇ ಪ್ರಕರಣ ಮತ್ತು ಆದಾಯ ತೆರಿಗೆ ಅಧಿನಿಯಮ, 1961 (1961ರ 43)ರ 281ಎ ಪ್ರಕರಣ-ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) (1)ನೇ ಉಪಪ್ರಕರಣದಲ್ಲಿರುವುದು ಯಾವುದೂ, ಆದಾಯ ತೆರಿಗೆ ಅಧಿನಿಯಮ, 1961 (1961ರ 43)ರ 281ಎ ಪ್ರಕರಣವು ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಮುಂದುವರಿಯುತ್ತಿರುವ ಪ್ರವರ್ತನೆಗೆ ಬಾಧಕವನ್ನುಂಟು ಮಾಡತಕ್ಕುದಲ್ಲವೆಂದು ಸಂದೇಹಗಳ ನಿವಾರಣೆಗಾಗಿ ಈ ಮೂಲಕ ಘೋಷಿಸಲಾಗಿದೆ.

8. ನಿಯಮ ರಚನಾಧಿಕಾರ:- (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧಿಸಬಹುದು, ಎಂದರೆ:-

(ಎ) 5ನೇ ಪ್ರಕರಣದ ಮೇರೆಗೆ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲು ಸಕ್ಷಮವಾದ ಪ್ರಾಧಿಕಾರ;

(ಬಿ) 5ನೇ ಪ್ರಕರಣದ ಮೇರೆಗೆ ಸ್ವತ್ತುಗಳನ್ನು ಆರ್ಜಿಸತಕ್ಕ ರೀತಿ ಮತ್ತು ಅದಕ್ಕಾಗಿ ಅನುಸರಿಸಬೇಕಾದ ಪ್ರಕ್ರಿಯೆ;

(ಸಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕುದು, ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸತಕ್ಕುದಲ್ಲವೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕುದಲ್ಲ.

9. ನಿರಸನ ಮತ್ತು ಉಳಿಸುವಿಕೆ:- (1) ಬೇನಾಮಿ ವ್ಯವಹಾರ (ಸ್ವತ್ತನ್ನು ಹಿಂದಕ್ಕೆ ಪಡೆಯುವ ಹಕ್ಕಿನ ನಿಷೇಧ) ಅಧ್ಯಾದೇಶ, 1988 (1988ರ ಅಧ್ಯಾದೇಶ 2) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನ ಏನೇ ಇದ್ದಾಗ್ಯೂ, ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕುದು.

* * * * *

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು-1 ಕಾ.ಸೂ. ಪ್ರ.714 ಪ್ರ.6